KABI010046572025

**ಪ್ರಧಾನ ಜಿಲ್ಲಾ, ಸತ್ರ ನ್ಯಾಯಾಧೀಶರ ಹಾಗೂ ವಿಶೇಷ ನ್ಯಾಯಾಲಯ, ಬಳ್ಳಾರಿ.**

**ವಿಶೇಷ ಮೊಕದ್ದಮೆ ಸಂಖ್ಯೆ: 1503/2025**

**ಫಿರ್ಯಾದಿದಾರ:** ಸರ್ಕಾರದ ಪರವಾಗಿ
ಶ್ರೀಮತಿ ಬಿ. ಆರ್. ಮಮತಾ,
ಭೂ ವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ,
ಬಳ್ಳಾರಿ.

**-ವಿರುದ್ಧ -**

**ಆರೋಪಿತರುಃ** **ಶ್ರೀ ಶ್ರೀನಿವಾಸ್ ರಾವ್ ಟಿ., ಹಾಗೂ ಇತರರು**

-----

**ದೋಷಾರೋಪಣೆ**

**ಶ್ರೀ ಸಿದ್ದಲಿಂಗ ಪ್ರಭು, ಬಿ.ಎಸ್‌ಸಿ., ಎಲ್‌ಎಲ್.ಬಿ., ಪ್ರಧಾನ ಜಿಲ್ಲಾ, ಸತ್ರ ಹಾಗೂ ವಿಶೇಷ ನ್ಯಾಯಾಧೀಶರು, ಬಳ್ಳಾರಿ** ಆದ ನಾನು ಈ ಮೂಲಕ ಆರೋಪಿತರಾದ :

1. ಶ್ರೀ ಟಿ. ಶ್ರೀನಿವಾಸ ರಾವ್,
   ತಂದೆಃ ಟಿ. ಅಮೇಶ್ವರ ರಾವ್,
   ಇಸ್ಫಾತ್ ಪ್ರೈವೇಟ್ ಕಂಪನಿ ಲಿಮಿಟೆಡ್‌ನ
   ಮ್ಯಾನೇಜಿಂಗ್ ಡೈರಕ್ಟರ್,
   ವಾಸಃ ಮನೆ ಸಂ. 193, ವಾರ್ಡ್ ನಂ. 18,
   ಕಪ್ಪಗಲ್ ರಸ್ತೆ, 7ನೇ ಕ್ರಾಸ್ ಎಡಬದಿ,
   ಎಂ.ವಿ. ನಗರ, ಬಳ್ಳಾರಿ.

5. ಇಸ್ಪಾತ್ ಪ್ರೈವೇಟ್ ಲಿಮಿಟೆಡ್,
ಹಲಕುಂದಿ ಗ್ರಾಮ, ಬಳ್ಳಾರಿ.
ಪ್ರತಿನಿಧಿಸುವವರು ಪ್ಲಾಂಟ್ ಮ್ಯಾನೇಜರ್,
ಶ್ರೀ ಭವಾನಿ ಸಿಂಗ್, ತಂದೆಃ ಕೇಸರ್ ಸಿಂಗ್,
ವಾಸಃ ಪ್ಲಾಟ್ ನಂ5, ವಾರ್ಡ್ ನಂ. 7,
ತಳಮಹಡಿ, ರಾಘವೇಂದ್ರ ಕಾಲೋನಿ,
2ನೇ ಹಂತ, ಅಯ್ಯಪ್ಪ ಸ್ವಾಮಿ ಗುಡಿ ಹತ್ತಿರ,
ಕೆ.ವಿ.ಟಿ. ನಗರ, ಬಳ್ಳಾರಿ.

6. ಇಸ್ಪಾತ್ ಪ್ರೈವೇಟ್ ಲಿಮಿಟೆಡ್,
ಹಲಕುಂದಿ ಗ್ರಾಮ, ಬಳ್ಳಾರಿ,
ಪ್ರತಿನಿಧಿಸುವವರು ಪ್ಲಾಂಟ್ ಮ್ಯಾನೇಜರ್,
ಶ್ರೀ ಕಪಿಲ್ ಭೂತ್ರಾ, ತಂದೆಃ ಸಂಜಯ ಕುಮಾರ್,
ಮನೆ ಸಂಖ್ಯೆಃ 2141, ಸೆಕ್ಟರ್ 14-ಪಿ,
ಹಿಸ್ಸಾರ್, ಅಂಚೆಃ ಹಿಸ್ಸಾರ್, ಜಿಲ್ಲೆಃ ಹಿಸ್ಸಾರ್,
ಹರಿಯಾಣ ರಾಜ್ಯ.

ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆಯ ಕ್ರಮವೇನೆಂದರೆಃ

ಈ ಪ್ರಕರಣದ ಆರೋಪಿ ಸಂಖ್ಯೆಃ 1, 5 ಮತ್ತು 6 ಆದ ನೀವುಗಳು, ಬಳ್ಳಾರಿಯ ಮೆಸರ್ಸ್ ಇಸ್ಪಾತ್ ಪ್ರೈವೇಟ್ ಲಿಮಿಟೆಡ್‌ಕಂಪನಿಯ ಅಧಿಕಾರಿಗಳಾಗಿದ್ದು, ನೀವು ಕೆಲಸ ನಿರ್ವಹಿಸುವ ಇಸ್ಪಾತ್ ಪ್ರೈವೇಟ್ ಲಿಮಿಟೆಡ್ ಕಂಪನಿ, ಮೆ. ಪಾರ್ವತಿ ಟ್ರೇಡರ್ಸನ ಎನ್. ಶಶಿಧರ ತಂದೆ ರಾಮದಾಸ್, ಬಳ್ಳಾರಿಯ ಮಣಿಕಂಠ ಟ್ರಾನ್ಸಪೋರ್ಟನ ಶೀನಾ ಅಲಿಯಾಸ್ ಶ್ರೀನಿವಾಸ, ಕಡಪಾ ಜಿಲ್ಲೆಯ ಪೊದ್ದಟ್ಟೂರು ಸ್ಥಳದ ಮೆ.ಸಾಹಿತಿ ಟ್ರಾನ್ಸಪೋರ್ಟನ ಮಲ್ಲಿಕಾರ್ಜುನ ನೀವುಗಳು ಅಕ್ರಮ ಕಬ್ಬಿಣ ಅದಿರು ಪುಡಿ ಸಾಗಾಣಿಕೆಯಲ್ಲಿ ನಿರತರಾಗಿದ್ದು,

ದಿನಾಂಕ 19/06/2021 ರ ರಾತ್ರಿ 10-30 ರ ಸಮಯದಲ್ಲಿ ಬಳ್ಳಾರಿ-ಬೆಂಗಳೂರು ರಸ್ತೆ ಹಲಕುಂದಿ ಗ್ರಾಮದ ಬಳಿ ಇರುವ ಸಿದ್ದಾಪುರ ರಸ್ತೆ ರೈಲ್ವೇ ಗೇಟ್ ಸಮೀಪ ಈ ಕೆಳಗೆ ವಿವರಿಸಿದ ಅಂದರೆ, 1) ಎಪಿ-39/ಟಿ- 9655, 2) ಎಪಿ-39/ವಿ- 7676, 3) ಎಪಿ-04/ಟಿಡಬ್ಲ್ಯೂ- 6669, 4) ಎಪಿ- 39/ವೈ-8799, 5) ಕೆಎ- 01/ಎಇ- 5128, 6) ಎಪಿ- 04/ಟಿಡಬ್ಲ್ಯೂ- 5598, 7) ಎಪಿ-04/ಟಿಡಬ್ಲ್ಯೂ- 6588, 8) ಕೆಎ-34/ಬಿ- 6444, 9) ಎಪಿ- 39/ವೈ-7899, 10) ಎಪಿ-04/ಯುಬಿ- 1188, 11) ಎಪಿ-04/ಯುಬಿ- 1818, 12) ಎಪಿ-02/ಟಿಸಿ- 1879, 13) ಎಪಿ- 39/ಟಿಟಿ- 8789, 14) ಎಪಿ-21/ಟಿಝೆಡ್-5609, 15) ಎಪಿ- 21/ಟಿಝೆಡ್- 2277, 16) ಎಪಿ-21/ಟಿವೈ-7929, 17) ಎಪಿ- 21/ಟಿವೈ- 6214, 18) ಎಪಿ- 21/ಟಿವೈ- 5850 ಮತ್ತು 19) ಎಪಿ- 02/ಟಿಇ- 1212 ನೋಂದಣಿ ಸಂಖ್ಯೆವುಳ್ಳ 19 ವಿವಿಧ ಲಾರಿಗಳಲ್ಲಿ, ಅಂದಾಜು ₹8,12,000/- ಬೆಲೆ ಬಾಳುವ ಒಟ್ಟಾರೆ 580 ಮೆಟ್ರಿಕ್ ಟನ್ ಕಬ್ಬಿಣದ ಅದಿರಿನ ಪುಡಿಯನ್ನು ಯಾವುದೇ ಇಲಾಖೆಯ ಅನುಮತಿ ಯಾ ಪರವಾನಿಗೆ ಇಲ್ಲದೇ ಹಾಗೂ ಸರ್ಕಾರಕ್ಕೆ ನ್ಯಾಯಯುತವಾಗಿ ಪಾವತಿಸಬೇಕಿದ್ದ ರಾಜಧನ, ತೆರಿಗೆ ಮತ್ತಿತರೆ ಸಂಬಂಧಿತ ರಾಜಸ್ವವನ್ನು ನೀಡದೇ ಸದರಿ ಲಾರಿಗಳ ಮುಖೇನ ಸಾಗಾಣಿಕೆ ಮಾಡಿದ್ದಲ್ಲದೇ,

ಬಳ್ಳಾರಿ ತಾಲೂಕು ಹಲಕುಂದಿ ಗಾಮದ ಸರ್ವೆ ನಂ. 250/ಬಿ1, 250/ಬಿ2 ಮತ್ತು 276/1 ರಲ್ಲಿರುವ ನಿಮ್ಮ ಸಂಸ್ಥೆ ಮೆ. ಬಳ್ಳಾರಿ ಇಸ್ಪಾತ್ ಪ್ರೈವೇಟ್ ಲಿಮಿಟೆಡ್ ಕಂಪನಿ/ಫ್ಯಾಕ್ಟರಿಯ ಆವರಣದಲ್ಲಿ ಅಂದಾಜು 10 ಮೆಟ್ರಿಕ್ ಟನ್ ಪ್ರಮಾಣದ ಕಬ್ಬಿಣದ ಅದಿರು ಪುಡಿಯನ್ನು ಯಾವುದೇ ಪರವಾನಿಗೆ/ ಆಧಾರ ವಿಲ್ಲದೇ ದಾಸ್ತಾನು ಮಾಡುವ ಮುಖೇನ ನೀವು ಕೆಲಸ ನಿರ್ವಹಿಸುವ ಸಂಸ್ಥೆ, ನೀವುಗಳು ಹಾಗೂ ಇತರೆ ಮೇಲೆ ಹೇಳಿದ ವ್ಯಕ್ತಿಗಳು ಸಮಾನ ಉದ್ದೇಶದಿಂದ ಗಣಿಗಳು ಮತ್ತು ಖನಿಜಗಳ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ, 1957 ರ ಕಲಂ 4(1)(ಎ) ಸಹವಾಚಕ ಕರ್ನಾಟಕ (ಖನಿಜಗಳ ಅಕ್ರಮ ಗಣಿಗಾರಿಕೆ, ಸಾಗಣೆ ಮತ್ತು ಸಂಗ್ರಹಣೆ ತಡೆಗಟ್ಟುವಿಕೆ) ನಿಯಮಗಳು, 2011 ರ ನಿಯಮ 3(2) ರ ಕಾನೂನನ್ನು ಉಲ್ಲಂಘಿಸಿ, ಗಣಿಗಳು

ಮತ್ತು ಖನಿಜಗಳ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ, 1957 ರ ಕಲಂ 21 ಮತ್ತು 23 ಶಿಕ್ಷಿಸಲ್ಪಡುವ ಆಪಾದನೆಗಳನ್ನು ಎಸಗಿದ್ದು, ಅವುಗಳು ಈ ವಿಶೇಷ ನ್ಯಾಯಾಲಯದ ಸಂಜ್ಞೆಯಲ್ಲಿರುತ್ತವೆ.

ಆದುದರಿಂದ, ಸದರಿ ಶಿಕ್ಷಾರ್ಹ ಆಪಾದನೆಗಳ ಕುರಿತಂತೆ ನೀವು ವಿಚಾರಣೆಗೆ ಒಳಪಡಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

ಸ್ಥಳ : ಬಳ್ಳಾರಿ
ದಿನಾಂಕ: **23/07/2026**

**(ಶ್ರೀ ಸಿದ್ದಲಿಂಗ ಪ್ರಭು)**
ಪ್ರಧಾನ ಜಿಲ್ಲಾ, ಸತ್ರ ಹಾಗೂ ವಿಶೇಷ ನ್ಯಾಯಾಧೀಶರು,
ಬಳ್ಳಾರಿ.

## ಪ್ರಧಾನ ಜಿಲ್ಲಾ, ಸತ್ರ ಹಾಗೂ ವಿಶೇಷ ನ್ಯಾಯಾಲಯ, ಬಳ್ಳಾರಿ.

## ವಿಶೇಷ ಮೊಕದ್ದಮೆ ಸಂಖ್ಯೆ 1053/2025

**ಫಿರ್ಯಾದಿದಾರಃ** ಸರ್ಕಾರದ ಪರವಾಗಿ
ಶ್ರೀಮತಿ ಬಿ.ಆರ್. ಮಮತಾ, ಭೂ ವಿಜ್ಞಾನಿ,
ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಬಳ್ಳಾರಿ.

**-ವಿರುದ್ಧ -**

**1 ನೇ ಆರೋಪಿತಃ** ಶ್ರೀ ಟಿ. ಶ್ರೀನಿವಾಸ ರಾವ್,
ತಂದೆಃ ಟಿ. ಅಮೇಶ್ವರ ರಾವ್,
ಇಸ್ಫಾತ್ ಪ್ರೈವೇಟ್ ಕಂಪನಿ ಲಿಮಿಟೆಡ್‌ನ
ಮ್ಯಾನೇಜಿಂಗ್ ಡೈರಕ್ಟರ್,
ವಾಸಃ ಮನೆ ಸಂ. 193, ವಾರ್ಡ್ ನಂ. 18,
ಕಪ್ಪಗಲ್ ರಸ್ತೆ, 7 ನೇ ಕ್ರಾಸ್ ಎಡಬದಿ,
ಎಂ.ವಿ. ನಗರ, ಬಳ್ಳಾರಿ.

--

**ಆರೋಪಿಯ ಹೇಳಿಕೆ**

ಪ್ರಶ್ನೆ 1. ನಿಮಗೆ ಕನ್ನಡ/ಹಿಂದಿ ಯಲ್ಲಿ ಓದಿ ಹೇಳಿದ ಸಂಗತಿಗಳು ಅರ್ಥವಾಯಿತೇ?

ಉತ್ತರಃ-

ಪ್ರಶ್ನೆ 2. ಮೇಲ್ಕಂಡ ದೋಷಾರೋಪಣೆಗಳನ್ನು ಕುರಿತಂತೆ ಅಪರಾಧಗಳನ್ನು ಮಾಡಿದ್ದಾಗಿ ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆಯಾಗಬೇಕೆಂದು ಹಕ್ಕೊತ್ತಾಯ ಮಾಡುತ್ತೀರಾ?

ಉತ್ತರಃ-

**ದೃಢೀಕರಣ**

ಮೇಲೆ ಹೇಳಿದ ಆರೋಪಣೆಯನ್ನು ನ್ಯಾಯಾಲಯವು ಆರೋಪಿತನಿಗೆ ಕನ್ನಡ/ಹಿಂದಿ ಭಾಷೆಯಲ್ಲಿ ಓದಿ ಹೇಳಿದ್ದು, ಅದನ್ನು ಕೇಳಿದ ನಂತರ ಆರೋಪಿತನು ತಾನು ತಪ್ಪಿತಸ್ಥನಲ್ಲ ಎಂದು ಒಪ್ಪಿಕೊಂಡಿರುತ್ತಾನೆ ಎಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ .

ಸ್ಥಳ : ಬಳ್ಳಾರಿ

ದಿನಾಂಕ:23/07/2026

**ಪ್ರಧಾನ ಜಿಲ್ಲಾ, ಸತ್ರ ಹಾಗೂ ವಿಶೇಷ ನ್ಯಾಯಾಧೀಶರು,**
**ಬಳ್ಳಾರಿ.**

**ಪ್ರಧಾನ ಜಿಲ್ಲಾ, ಸತ್ರ ಹಾಗೂ ವಿಶೇಷ ನ್ಯಾಯಾಲಯ, ಬಳ್ಳಾರಿ.**

**<u>ವಿಶೇಷ ಮೊಕದ್ದಮೆ ಸಂಖ್ಯೆ 1053/2025</u>**

**ಫಿರ್ಯಾದಿದಾರ:** ಸರ್ಕಾರದ ಪರವಾಗಿ
ಶ್ರೀಮತಿ ಬಿ.ಆರ್. ಮಮತಾ, ಭೂ ವಿಜ್ಞಾನಿ,
ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಬಳ್ಳಾರಿ.

**-ವಿರುದ್ಧ -**

**5 ನೇ ಆರೋಪಿತ:** ಇಸ್ಪಾತ್ ಪ್ರೈವೇಟ್ ಲಿಮಿಟೆಡ್,
ಹಲಕುಂದಿ ಗ್ರಾಮ, ಬಳ್ಳಾರಿ.
ಪ್ರತಿನಿಧಿಸುವವರು ಪ್ಲಾಂಟ್ ಮ್ಯಾನೇಜರ್,
ಶ್ರೀ ಭವಾನಿ ಸಿಂಗ್, ತಂದೆ: ಕೇಸರ್ ಸಿಂಗ್,
ವಾಸ: ಪ್ಲಾಟ್ ನಂ5, ವಾರ್ಡ್ ನಂ. 7,
ತಳಮಹಡಿ, ರಾಘವೇಂದ್ರ ಕಾಲೋನಿ,
2 ನೇ ಹಂತ, ಅಯ್ಯಪ್ಪ ಸ್ವಾಮಿ ಗುಡಿ ಹತ್ತಿರ,
ಕೆ.ವಿ.ಟಿ. ನಗರ, ಬಳ್ಳಾರಿ.

--

**<u>ಆರೋಪಿಯ ಹೇಳಿಕೆ</u>**

ಪ್ರಶ್ನೆ 1. ನಿಮಗೆ ಕನ್ನಡ/ಹಿಂದಿ ಯಲ್ಲಿ ಓದಿ ಹೇಳಿದ ಸಂಗತಿಗಳು ಅರ್ಥವಾಯಿತೇ?

ಉತ್ತರ:-

ಪ್ರಶ್ನೆ 2. ಮೇಲ್ಕಂಡ ದೋಷಾರೋಪಣೆಗಳನ್ನು ಕುರಿತಂತೆ ಅಪರಾಧಗಳನ್ನು ಮಾಡಿದ್ದಾಗಿ ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆಯಾಗಬೇಕೆಂದು ಹಕ್ಕೊತ್ತಾಯ ಮಾಡುತ್ತೀರಾ?

ಉತ್ತರ:-

**<u>ದೃಢೀಕರಣ</u>**

ಮೇಲೆ ಹೇಳಿದ ಆರೋಪಣೆಯನ್ನು ನ್ಯಾಯಾಲಯವು ಆರೋಪಿತನಿಗೆ ಕನ್ನಡ/ಹಿಂದಿ ಭಾಷೆಯಲ್ಲಿ ಓದಿ ಹೇಳಿದ್ದು, ಅದನ್ನು ಕೇಳಿದ ನಂತರ ಆರೋಪಿತನು ತಾನು ತಪ್ಪಿತಸ್ಥನಲ್ಲ ಎಂದು ಒಪ್ಪಿಕೊಂಡಿರುತ್ತಾನೆ ಎಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ .

ಸ್ಥಳ : ಬಳ್ಳಾರಿ

ದಿನಾಂಕ:23/07/2026

**ಪ್ರಧಾನ ಜಿಲ್ಲಾ, ಸತ್ರ ಹಾಗೂ ವಿಶೇಷ ನ್ಯಾಯಾಧೀಶರು,**
**ಬಳ್ಳಾರಿ.**

**ಪ್ರಧಾನ ಜಿಲ್ಲಾ, ಸತ್ರ ಹಾಗೂ ವಿಶೇಷ ನ್ಯಾಯಾಲಯ, ಬಳ್ಳಾರಿ.**

**ವಿಶೇಷ ಮೊಕದ್ದಮೆ ಸಂಖ್ಯೆ 1053/2025**

**ಫಿರ್ಯಾದಿದಾರಃ** ಸರ್ಕಾರದ ಪರವಾಗಿ
ಶ್ರೀಮತಿ ಬಿ.ಆರ್. ಮಮತಾ, ಭೂ ವಿಜ್ಞಾನಿ,
ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಬಳ್ಳಾರಿ.

**-ವಿರುದ್ಧ -**

**6 ನೇ ಆರೋಪಿತಃ** ಇಸ್ಪಾತ್ ಪ್ರೈವೇಟ್ ಲಿಮಿಟೆಡ್,
ಹಲಕುಂದಿ ಗ್ರಾಮ, ಬಳ್ಳಾರಿ,
ಪ್ರತಿನಿಧಿಸುವವರು ಪ್ಲಾಂಟ್ ಮ್ಯಾನೇಜರ್,
ಶ್ರೀ ಕಪಿಲ್ ಭೂತ್ರಾ, ತಂದೆಃ ಸಂಜಯ
ಕುಮಾರ್, ಮನೆ ಸಂ.2141, ಸೆಕ್ಟರ್ 14-ಪಿ,
ಹಿಸ್ಸಾರ್, ಅಂಚೆಃ ಹಿಸ್ಸಾರ್, ಜಿಲ್ಲೆಃ ಹಿಸ್ಸಾರ್,
ಹರಿಯಾಣ ರಾಜ್ಯ.

**--**

**ಆರೋಪಿಯ ಹೇಳಿಕೆ**

ಪ್ರಶ್ನೆ 1. ನಿಮಗೆ ಕನ್ನಡ/ಹಿಂದಿ ಯಲ್ಲಿ ಓದಿ ಹೇಳಿದ ಸಂಗತಿಗಳು ಅರ್ಥವಾಯಿತೇ?

ಉತ್ತರಃ-

ಪ್ರಶ್ನೆ 2. ಮೇಲ್ಕಂಡ ದೋಷಾರೋಪಣೆಗಳನ್ನು ಕುರಿತಂತೆ ಅಪರಾಧಗಳನ್ನು ಮಾಡಿದ್ದಾಗಿ ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆಯಾಗಬೇಕೆಂದು ಹಕ್ಕೊತ್ತಾಯ ಮಾಡುತ್ತೀರಾ?

ಉತ್ತರಃ-

**ದೃಢೀಕರಣ**

ಮೇಲೆ ಹೇಳಿದ ಆರೋಪಣೆಯನ್ನು ನ್ಯಾಯಾಲಯವು ಆರೋಪಿತನಿಗೆ ಕನ್ನಡ/ಹಿಂದಿ ಭಾಷೆಯಲ್ಲಿ ಓದಿ ಹೇಳಿದ್ದು, ಅದನ್ನು ಕೇಳಿದ ನಂತರ ಆರೋಪಿತನು ತಾನು ತಪ್ಪಿತಸ್ಥನಲ್ಲ ಎಂದು ಒಪ್ಪಿಕೊಂಡಿರುತ್ತಾನೆ ಎಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ .

ಸ್ಥಳ : ಬಳ್ಳಾರಿ

ದಿನಾಂಕ:23/07/2026

**ಪ್ರಧಾನ ಜಿಲ್ಲಾ, ಸತ್ರ ಹಾಗೂ ವಿಶೇಷ ನ್ಯಾಯಾಧೀಶರು,**

**ಬಳ್ಳಾರಿ.**